13.	ಹಾಸನ	47.80	54.87
14.	ದಕ್ಷಿಣ ಕನ್ನಡ	23.90	27.43
15.	ಉಡುಪಿ	25.15	28.88
16.	ಚಿಕ್ಕಮಗಳೂರು	30.83	35.40
17.	ಕೊಡಗು	09.85	11.31
18	ಬೆಳಗಾವಿ	86.89	99.76
19.	ಧಾರವಾಡ	18.74	21.52
20	ಹಾವೇರಿ	29,87	34.30
21	ಗದಗ್	14.70	16.88
22.	ಬಿಜಾಪುರ	28.11	32.28
23.	ಬಾಗಲಕೋಟೆ	32.96	37.84
24.	ಉತ್ತರಕನ್ನಡ	28.96	33.25
25.	ಗುಲ್ಬರ್ಗಾ	73.52	84.41
26.	ಬಳ್ಳಾರಿ	41.56	47.74
27.	ರಾಯಚೂರು	32.23	43.89
28.	ಕೊಪ್ಪಳ	24.50	28.13
29.	ಬೀದರ್	28.96	33.25
	ಒಟ್ಟು	**955.86**	**1097.41**

ಪಶು ಆಸ್ಪತ್ರೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ

109 (294): ಶ್ರೀ ಪಾಟೀಲ್ ಎ. ಎಸ್. (ನಡಹಳ್ಳಿ): ದೇವರ ಹಿಪ್ಪರಗಿ: ಮಾನ್ಯ ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆ ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಳೆದ 2008–09, 2009–10ರಿಂದ ಇಲ್ಲಿಯವರೆಗೆ ಪಶು ಸಂಗೋಪನಾ ಇಲಾಖೆಯಿಂದ ಯಾವ ಯಾವ ಅಬಿವೃದ್ಧಿ ಕಾಮಗಾರಿಗಳು ಕೈಗೊಳ್ಳಲಾಗಿದೆ.

ಆ) ಈ ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿದೆ? ಈ ಕಾಮಗಾರಿಗಳಿಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ?

ಇ) ಸದರಿ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಎಷ್ಟು ಪಶು ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆ? (ವಿವರ ನೀಡುವುದು):

ಶ್ರೀ ರೇವೂ ನಾಯಕ ಬೆಳಮಗಿ (ಪಶು ಸಂಗೋಪನೆ ಸಚಿವರು)

ಅ) 2008–09ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯ ಕಲಕೇರಿ ಪಶು ಚಿಕಿತ್ಸಾಲಯಕ್ಕೆ ಹೊಸ ಕಟ್ಟಡ ನಿರ್ಮಾಣ, ತುಂಬಗಿ ಪಶು ಚಿಕಿತ್ಸಾಲಯ ಕಟ್ಟಡದ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿತ್ತು.

2009–10ನೇ ಸಾಲಿನಲ್ಲಿ ದೇವರ ಹಿಪ್ಪರಗಿ ಪಶು ಆಸ್ಪತ್ರೆ ಕಟ್ಟಡ ಹಾಗೂ ಢೋಣೂರು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಕಟ್ಟಡ ದುರಸ್ತಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಕಲಕೇರಿಯ ಪಶು ಚಿಕಿತ್ಸಾಲಯದ ಕಟ್ಟಡ ಕಾಮಗಾರಿ ಮೇಲ್ಛಾವಣಿ ಹಂತದವರೆಗೆ ಬಂದಿದ್ದು ಉಳಿದ ಇತರೆ ರಿಪೇರಿ ಕಾಮಗಾರಿಗಳು ಮುಕ್ತಾಯಗೊಂಡಿವೆ. ಈ ಕಾಮಗಾರಿಗಳಿಗೆ ಒಟ್ಟು ರೂ. 16.90 ಲಕ್ಷ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಇ) ಸದರಿ ಕ್ಷೇತ್ರಕ್ಕೆ ಕಳೆದ 3 ವರ್ಷಗಳಿಂದ ಯಾವುದೇ ಹೊಸ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡಿರುವುದಿಲ್ಲ.

ಪಶು ಆಸ್ಪತ್ರೆಗೆ ಮಂಜೂರಾತಿಯ ಬಗ್ಗೆ

110 (296): ಶ್ರೀ ಪ್ರತಾಪ್ ಗೌಡ ಪಾಟೀಲ್ (ಮಸ್ಕಿ): ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಮಾಡಿದ್ದಲ್ಲಿ ಯಾವ ಆಧಾರದ ಮೇಲೆ ಮಂಜೂರು ಮಾಡಲಾಗಿದೆ?